# ಆಹಾ ಸುದ್ದಿ!

★ ಸಸಿತೋಟ

ಈ ಬಾರಿ ಇಗ್ನೋಬೆಲ್ ಪ್ರಶಸ್ತಿಗೆ ಆಯ್ಕೆಯಾದ ಅತ್ಯಂತ ರೋಚಕವಾದ ಸಂಶೋಧನೆಯೆಂದರೆ ಸಸ್ತನಿಗಳು ಮೂತ್ರ ವಿಸರ್ಜನೆಗೆ ತೆಗೆದುಕೊಳ್ಳುವ ಸಮಯ ಎಷ್ಟು ಎಂಬುದು. ಮನುಷ್ಯನಿರಲಿ, ನಾಯಿಯಿರಲಿ 21 ಸೆಕೆಂಡ್‌ಗಳು ಬೇಕಂತೆ. ಆದರೆ ತಯಾರಿ ಸಮಯ ಲೆಕ್ಕ ಹಾಕಿದರೆ ಮನುಷ್ಯನಿಗಿಂತ ನಾಯಿಗೆ ಕಡಿಮೆ ಸಮಯ ಸಾಕು. ಉಡುಪು ತೆಗೆಯುವ, ಮತ್ತೆ ಹಾಕುವ ರಗಳೆಯೇ ಇಲ್ಲದೇ ಕೆಲಸ ಪೂರೈಸಬಹುದು.




ಜಪಾನಿನಲ್ಲಿ ಆಭರಣದ ಕಂಪೆನಿಯೊಂದು ತಯಾರಿಸಿದ ಚಿನ್ನದ ಪಿಟೀಲು. 14 ಕೆಜಿ ಚಿನ್ನದಿಂದ ತಯಾರಿಸಿದ ಈ ಪಿಟೀಲಿನ ಬೆಲೆ 12.5 ಲಕ್ಷ ಡಾಲರ್ (ಸುಮಾರು 8.15 ಕೋಟಿ ರೂಪಾಯಿ). ರೋಮ್ ಹೊತ್ತಿ ಉರಿಯುವಾಗ ನೀರೊ ಅದಾವ ಪಿಟೀಲು ಬಾರಿಸಿದ್ದನೋ! ಆದರೆ ಆರ್ಥಿಕ ಕುಸಿತದಿಂದ ಮುಳುಗುತ್ತಿರುವ ಜಪಾನಿನಲ್ಲಿ ಈ ಚಿನ್ನದ ಪಿಟೀಲು ಬಾರಿಸುವವರು ಯಾರಿದ್ದಾರೋ!




ಚೀನಾದ ಜನ 'ಹಾಸ್ಯಾಸ್ಪದ ಪೀಠೋಪಕರಣ' ತಯಾರಿಕೆಯಲ್ಲಿ ಎತ್ತಿದ ಕೈಯಂತೆ. ಖಾಲಿ ಡಬ್ಬಿ, ಹೆಂಡತಿಯ ಟ್ರಂಕ್, ಹಳೆಯ ಫ್ರಿಜ್.. ಹೀಗೆ ಯಾವ ವಸ್ತು ಕಂಡರೂ ಅದನ್ನು ಕುರ್ಚಿಯ ತರಹ ಬಳಸುವಲ್ಲಿ ನಿಪುಣರಂತೆ. ಇದು ಕಸದಿಂದ ರಸ ಎಂದುಕೊಂಡರೂ ಆ ಕ್ಷೇತ್ರದಲ್ಲೂ ವಿನ್ಯಾಸಗಾರರು ಹುಟ್ಟಿಕೊಂಡಿದ್ದಾರಂತೆ. ಡಬ್ಬಾ ವಿನ್ಯಾಸಗಾರರು ಎಂದು ತಮಗೆ ತಾವೇ ಹಣೆಪಟ್ಟಿ ಅಂಟಿಸಿಕೊಳ್ಳಬಹುದು.



ಪ್ರಪಂಚದ ಎತ್ತರದ ಮನುಷ್ಯ ಸುಲ್ತಾನ್ ಕೊಸೆನ್ (8 ಅಡಿ ಎರಡು ಮುಕ್ಕಾಲು ಇಂಚು) ಹಾಗೂ ಎರಡನೆಯ ಎತ್ತರದ ಮನುಷ್ಯ ಬ್ರಾಹಿಮ್ ಈಚೆಗೆ ಜರ್ಮನಿಯ ರೆಡೆನ್‌ಗೆ ಭೇಟಿ ನೀಡಿದ್ದರಂತೆ. ಪಾದಗಳಿಗೆ ಸೂಕ್ತ ಅಳತೆಯ ಶೂ ಹುಡುಕಲು ಅಲ್ಲಿಯ ಶೂ ಅಂಗಡಿಗಳಲ್ಲಿ ಹುಡುಕಾಡಿ ಕೊನೆಗೂ ಯೂರೋಪಿಯನ್ ಅಳತೆ 60ರ ಶೂ ಸಂಪಾದಿಸಿ ನಿಟ್ಟುಸಿರು ಬಿಟ್ಟರಂತೆ. ದೊಡ್ಡವರ ಸಮಸ್ಯೆ ದೊಡ್ಡದಾಗೇ ಇರುತ್ತದೆ.



ಪೆಟ್ರೋಲ್ ಬಂಕ್‌ಗಳಲ್ಲಿ ಮಹಿಳಾ ಸಿಬ್ಬಂದಿಗಳನ್ನು ಬಿಕಿನಿಯಲ್ಲಿ ನಿಲ್ಲಿಸಿ ಗ್ರಾಹಕರನ್ನು ಆಕರ್ಷಿಸುವ ವಿಧಾನ ಈಗ ಹಳೆಯದಾಯಿತು. ಉಕ್ರೇನ್‌ನಲ್ಲಿ ಗ್ರಾಹಕರೇ ಬಿಕಿನಿ ತೊಟ್ಟು ಹೋದರೆ ಉಚಿತವಾಗಿ ಪೆಟ್ರೋಲ್ ಭರ್ತಿ ಮಾಡಿಕೊಳ್ಳಬಹುದಂತೆ. ಬಿಕಿನಿ ಖರೀದಿಗೆ ಖರ್ಚು ಮಾಡಿದ ಹಣ ಪೆಟ್ರೋಲ್‌ನಲ್ಲಿ ಬಂದು ಬಿಡುತ್ತದೆ ಎಂದು ನೂರಾರು ಯುವತಿಯರು ಉಳಿತಾಯ ಯೋಜನೆ ಆರಂಭಿಸಿದ್ದಾರಂತೆ.

ಪೆನ್ಸಿಲ್ವೇನಿಯಾದ ಅಪರಾಧಿಯೊಬ್ಬನಿಗೆ ಕೋರ್ಟ್ 20 ವರ್ಷಗಳ ಜೈಲು ಶಿಕ್ಷೆ ವಿಧಿಸಿತು. ಶಿಕ್ಷೆ ಪ್ರಕಟಿಸಿದ ಕೂಡಲೇ ಆತ ಮಾಡಿದ ಮೊದಲ ಕೆಲಸ ಸ್ನೇಹಿತೆಯ ಜೊತೆ ಮದುವೆಯಾಗಿದ್ದು. ಕೋರ್ಟ್ ರೂಮಿನಲ್ಲೇ ಮದುವೆಯಾದ ಆತ ಜೈಲಿನ ಬಂಧನದ ಜೊತೆ ಇನ್ನೊಂದು ಬಂಧನಕ್ಕೂ ಒಳಗಾದ. ಜೈಲಿನಿಂದ ಬಿಡುಗಡೆ ಹೊಂದಲು 20 ವರ್ಷಗಳು ಬೇಕು. ಆದರೆ ವಿವಾಹ ಬಂಧನದಿಂದ ಬಿಡುಗಡೆ ಹೊಂದಲು ಅಷ್ಟು ದೀರ್ಘ ಅವಧಿವರೆಗೆ ಕಾಯಬೇಕಾಗಿಲ್ಲ ಆತ.